ದಿನಾಂಕಃ 15-10-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲು**: 2** ನೇ ಎದುರುದಾರ ಪರ ಶ್ರೀ ಎಂಎಂಕೆ ವಕೀಲರಿಂದ**:**</u>

ಮೃತ ಶಿವಾಜಿ @ ಶಿವಾನಂದ ನನ್ನ ಗಂಡ. 2 ರಿಂದ 7 ನೇ ಅರ್ಜಿದಾರರು ನನ್ನ ಮಕ್ಕಳು. 8 ಮತ್ತು 9 ನೇ ಅರ್ಜಿದಾರರು ನನ್ನ ಅತ್ತೆ-ಮಾವ. ನಾನು ಮನೆಗೆಲಸ ಮಾಡುತ್ತೇನೆ. 8 ಮತ್ತು 9 ನೇ ಅರ್ಜಿದಾರರು ಮನೆಯಲ್ಲಿಯೇ ಇರುತ್ತಾರೆ. ನನ್ನ ಗಂಡ ಮೃತಪಟ್ಟಾಗ ಅವರ ವಯಸ್ಸು 38 ವರ್ಷ ಇತ್ತು. ಆ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರಪಡಿಸಿರುವುದಿಲ್ಲ. ನನ್ನ ಗಂಡ 4 ನೇ ತರಗತಿವರೆಗೆ ಅಭ್ಯಾಸ ಮಾಡಿರುತ್ತಾರೆ. ನನ್ನ ಗಂಡನ ಆಧಾರ ಕಾರ್ಡ ಅಥವಾ ಶಾಲಾ ದಾಖಲೆ ಹಾಜರಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಮೃತಪಟ್ಟಾಗ ನನ್ನ ಗಂಡನ ವಯಸ್ಸು 50 ವರ್ಷ ಇತ್ತು, ಕಾರಣ ಆ ಬಗ್ಗೆ ದಾಖಲೆಗಳನ್ನು ಹಾಜರಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ವಯಸ್ಸು 38 ವರ್ಷ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಕೂಲಿ ಕೆಲಸ ಮಾಡುತ್ತಿದ್ದ. ಆ ಬಗ್ಗೆ ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ಗಂಡ ತಿಂಗಳಿಗೆ 50 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿರುವ ಕುರಿತು ಯಾವುದೇ ದಾಖಲೆ ಹಾಜರಪಡಿಸಿಲ್ಲ. ನನ್ನ ಗಂಡ ಯಾವುದೇ ಕೆಲಸ ಮಾಡುತ್ತಿರಲಿಲ್ಲ, ತಿಂಗಳಿಗೆ 50 ಸಾವಿರ ರೂಪಾಯಿ ಸಂಪಾದನೆ ಮಾಡುತ್ತಿರಲಿಲ್ಲ, ಆದರೂ ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಪಘಾತವು ಮಹಾಲಿಂಗಪೂರದ ಹತ್ತಿರ ಗೂಡ್ಸ ಕ್ಯಾರಿಯರ ವಾಹನ ಮತ್ತು ಮೋಟರ ಸೈಕಲ್ ಮಧ್ಯೆಯಾಗಿರುತ್ತದೆ. ಅಪಘಾತವು ಗೋಕಾಕ-ಮಹಾಲಿಂಗಪೂರ ರಸ್ತೆಯ ಮಧ್ಯದಲ್ಲಿ ಆಗಿರುತ್ತದೆ ಎಂದರೆ ಸರಿ. ಅಪಘಾತವು ರಾತ್ರಿ 12-00 ಗಂಟೆ ಸುಮಾರಿಗೆ ಆಗಿರುತ್ತದೆ. ಆ ದಿನ ನನ್ನ ಗಂಡ ಮಧ್ಯಪಾನ ಮಾಡಿ ರಸ್ತೆಯ ಮಧ್ಯೆದಲ್ಲಿ ವಾಹನ ನಿಲ್ಲಿಸಿದ್ದ, ಕಾರಣ ಅವರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಸ್ಥಳದಲ್ಲಿ ಯಾವುದೇ ಬೆಳಕಿನ ವ್ಯವಸ್ಥೆ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ವಾಹನವನ್ನು ರಸ್ತೆಯ ಮಧ್ಯೆದಲ್ಲಿ ಯಾವುದೇ ಮುನ್ಸೂಚನೆಗಳು ಇಲ್ಲದೆ ನಿಲ್ಲಿಸಿಕೊಂಡು ನಿಂತಿದ್ದರಿಂದ ಕತ್ತಲಿನಲ್ಲಿ ಯಾವುದೇ ಬೆಳಕು ಇರದೇ ಇರುವುದರಿಂದ

ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಮೋಟರ ಸೈಕಲ್ ಚಲಾಯಿಸಲು ಪರವಾನಿಗೆ ಹೊಂದಿರಲಿಲ್ಲ ಹಾಗೂ ವಿಮೆ ಹೊಂದಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ.

ಅಪಘಾತದಲ್ಲಿ ನನ್ನ ಗಂಡನ ತಲೆಗೆ ಮತ್ತು ಕೈಗೆ ಭಾರಿ ಪ್ರಮಾಣದ ಗಾಯಗಳಾಗಿದ್ದವು. ಆ ದಿನ ನನ್ನ ಗಂಡ ಹೆಲ್ಮೇಟ್ ಹಾಕಿರಲಿಲ್ಲ ಎಂದರೆ ಸರಿ. ನನ್ನ ಗಂಡ ಹೆಲ್ಮೇಟ್ ಧರಿಸಿದ್ದರೆ ಅಪಘಾತದಲ್ಲಿ ಮೃತಪಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಅಪಘಾತವು ವಾಹನ ಸಂ.ಕೆಎ-51/ಎಬಿ-3671 ನೇದ್ದರ ಚಾಲಕನ ತಪ್ಪಿನಿಂದ ಆಗಿರುವುದಿಲ್ಲ, ನನ್ನ ಗಂಡನ ತಪ್ಪಿನಿಂದ ಆಗಿರುತ್ತದೆ, ಆದ್ದರಿಂದ 2 ನೇ ಎದುರುದಾರ ಪರಿಹಾರ ಕೊಡಲು ಬಾಧ್ಯಸ್ಥ ಅಲ್ಲ ಎಂದರೆ ಸರಿಯಲ್ಲ. ನಾನು ಮತ್ತು 2 ರಿಂದ 9 ನೇ ಅರ್ಜಿದಾರರು ನನ್ನ ಗಂಡನ ಸಂಪಾದನೆಯ ಮೇಲೆ ಅವಲಂಬಿರಾಗಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತಪಡಿಸಿದೆ ಎಂದು ಹೇಳಿದೆ ವಾಹನದ ಚಾಲಕ ಆ ದಿನ ಚಾಲನಾ ಪರವಾನಿಗೆ ಹೊಂದಿರಲಿಲ್ಲ ಹಾಗೂ ಪರ್ಮಿಟ್ ಇರಲಿಲ್ಲ, ಪಾಲಸಿ ನಿಯಮಗಳನ್ನು ಉಲ್ಲಂಘಣೆ ಮಾಡಿರುವುದರಿಂದ 1 ನೇ ಎದುರುದಾರ ಮಾತ್ರ ಪರಿಹಾರ ಕೊಡಲು ಬಾಧ್ಯಸ್ಥ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಉದ್ದೇಶದಿಂದ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು: **1** ನೇ ಎದುರುದಾರ ಪರ ಶ್ರೀ ಎಸ್.ಜಿ.ಎಸ್ ವಕೀಲರಿಂದ:</u>

ಆ ದಿನ ಅಪಘಾತಪಡಿಸಿದ ವಾಹನಕ್ಕೆ ವಿಮೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ವಾಹನ ಓಡಾಡಲು ಪರ್ಮಿಟ್ ಇತ್ತು ಎಂದರೆ ನನಗೆ ಗೊತ್ತಿಲ್ಲ. ಚಾಲಕನು ಚಾಲನಾ ಪರವಾನಿಗೆ ಹೊಂದಿದ್ದ ಎಂದರೆ ನನಗೆ ಗೊತ್ತಿಲ್ಲ. ಅಪಘಾತಪಡಿಸಿದ ವಾಹನಕ್ಕೆ 2 ನೇ ಎದುರುದಾರ ಕಂಪನಿಯ ವಿಮೆ ಚಾಲ್ತಿಯಲ್ಲಿರುವುದರಿಂದ 2 ನೇ ಎದುರುದಾರ ಮಾತ್ರ ಪರಿಹಾರ ಕೊಡಲು ಬಾಧ್ಯಸ್ಥ ಎಂದರೆ ಸರಿಯಲ್ಲ.

<u>ಮರು ವಿಚಾರಣೆ: ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ASHAPPA Digitally signed by ASHAPPA Date: 2025.10.15 17:21:09 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಪ್ರ.ದ.ನ್ಯಾದಂ.ಗಳು, ಬನಹಟ್ಟಿ